# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1501** |
| ಉತ್ತರಿಸಬೇಕಾದ ದಿನಾಂಕ | : | 17.03.2021 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಯಾವ ಯಾವ ವಸತಿ ಯೋಜನೆಗಳನ್ನು ಜಾರಿಗೆ ತರಲಾಗಿದೆ; | ರಾಜ್ಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ, ಬಡತನ ರೇಖೆಗಿಂತ ಕೆಳಗಿರುವ ವಸತಿರಹಿತ ಕುಟುಂಬಗಳಿಗೆ ವಸತಿ ಸೌಕರ್ಯ ಒದಗಿಸಲು ರಾಜೀವ್‌ಗಾಂಧಿ ವಸತಿ ನಿಗಮದಿಂದ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ಬಸವ ವಸತಿ ಯೋಜನೆ<br>2. ಡಾ\|\| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಹಾಗೂ ನಗರ)<br>3. ದೇವರಾಜು ಅರಸು ಯೋಜನೆ (ಗ್ರಾಮೀಣ ಹಾಗೂ ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ<br>5. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಹಾಗೂ ನಗರ) (ಕೇಂದ್ರಸರ್ಕಾರಪುರಸ್ಕೃತ) |
| ಆ) | ಅನುದಾನದ ಕೊರತೆಯಿಂದ ಈ ವಸತಿ ಯೋಜನೆಗಳ ಪ್ರಗತಿ ಕುಂಠಿತವಾಗಿ ಗ್ರಾಮೀಣ ಜನರಿಗೆ ವಸತಿಗಳು ಸಿಗುವುದು ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನುದಾನದ ಕೊರತೆಯಿಂದ ವಸತಿ ಯೋಜನೆಗಳ ಪ್ರಗತಿ ಕುಂಠಿತವಾಗಿರುವುದಿಲ್ಲ. ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಗ್ರಾಮೀಣ ಪ್ರದೇಶಕ್ಕೆ ಒಟ್ಟು ರೂ. 1448.18 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿ ಖರ್ಚು ಮಾಡಲಾಗಿರುತ್ತದೆ. |
| ಇ) | 2019-20 ರಿಂದ 2020-21 ನೇ ಸಾಲಿನ ಅತಿವೃಷ್ಟಿ ಮುಂತಾದ ಪ್ರಕೃತಿ ವಿಕೋಪಗಳಿಂದ ಮನೆ ಕಳೆದು ಕೊಂಡವರಿಗೆ ಪರಿಹಾರವಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಸಂಪೂರ್ಣವಾದ ಮಾಹಿತಿ ನೀಡುವುದು) | 2019 ನೇ ಸಾಲಿನಲ್ಲಿ ಉಂಟಾದ ನೆರೆ ಹಾವಳಿಯಿಂದ ಕಂದಾಯ ಇಲಾಖೆಯು ರಾಜ್ಯದ 25 ಜಿಲ್ಲೆಗಳಡಿ ಬರುವ 120 ತಾಲ್ಲೂಕುಗಳನ್ನು ಹಾಗೂ 2020ನೇ ಸಾಲಿನಲ್ಲಿ ಉಂಟಾದ ನೆರೆ ಹಾವಳಿಯಿಂದ ರಾಜ್ಯದ 25 ಜಿಲ್ಲೆಗಳಡಿ ಬರುವ 180 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಘೋಷಿಸಿ ಆದೇಶ ಹೊರಡಿಸಿದೆ.<br>ಪ್ರವಾಹದಿಂದ ತೀವ್ರ ಹಾಗೂ ಭಾಗಶಃ ಮನೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದ (NDRF/SDRF) ಮಾರ್ಗಸೂಚಿಯನ್ವಯ ಶೇ.15ರಷ್ಟು ಹಾನಿಯ ಮನೆಗೆ ರೂ.5200/-ಗಳು ಹಾಗೂ ತೀವ್ರ ಹಾಗೂ ಭಾಗಶಃ ಮನೆ ಹಾನಿಗೆ ರೂ.95,100/-ಗಳನ್ನು ನಿಗದಿಪಡಿಸಿದ್ದು, 2019-20 ನೇ ಸಾಲಿನ ನೆರೆ ಸಂತ್ರಸ್ಥರ ಪುನರ್ ವಸತಿ ಯೋಜನೆಯಡಿ ಸರ್ಕಾರ ಆದೇಶ ಸಂಖ್ಯೆ:ವಇ 78 ಹೆಚ್‌ಎಎಂ 2019, ದಿನಾಂಕ: 14.08.2020, 16.09.2019 ಮತ್ತು ಸರ್ಕಾರ ಆದೇಶ ಸಂಖ್ಯೆ:ವಇ 121 ಹೆಚ್‌ಎಎಂ 2019, ದಿನಾಂಕ: 18.10.2019, 17.01.2020, 10.02.2020 ಮತ್ತು 2020-21 ನೇ ಸಾಲಿನ ನೆರೆ ಸಂತ್ರಸ್ಥರ ಪುನರ್ ವಸತಿ ಯೋಜನೆಯಡಿ ಹೊರಡಿಸಲಾದ ಆದೇಶ ಸಂಖ್ಯೆ:ಕಂಇ 242 ಟಿಎನ್‌ಆರ್ 2020, ದಿನಾಂಕ: 07.08.2020 |

ರಲ್ಲಿ ರಾಜ್ಯ ಸರ್ಕಾರವು ಸದರಿ ಮೊತ್ತವನ್ನು ಕೆಳಕಂಡಂತೆ ನಿಗದಿ ಪಡಿಸಿ ಆದೇಶ ಹೊರಡಿಸಿದೆ.

| ಕ್ರ. ಸಂ. | ಹಾನಿಯಾದ ಮನೆಯ ವರ್ಗ | ಅಧಿಕೃತ/ಅನಧಿಕೃತ ಮನೆ | ಘಟಕ ವೆಚ್ಚ (ಬಾಡಿಗೆ/ ಶೆಡ್ ಒಳ ಗೊಂಡಂತೆ) (ರೂ.ಗಳಲ್ಲಿ) |
|---|---|---|---|
| 1 | ಸಂಪೂರ್ಣ (ಎ) | ಅಧಿಕೃತ | 5,50,000/- |
| | | ಅನಧಿಕೃತ (Insitue) | 1,00,000/- |
| | | ಅನಧಿಕೃತ (Relocation) | 5,50,000/- |
| 2 | ಭಾಗಶಃ - ಪುನರ್ ನಿರ್ಮಾಣ (ಬಿ2) | ಅಧಿಕೃತ | 5,50,000/- |
| | | ಅನಧಿಕೃತ (Insitue) | 1,00,000/- |
| | | ಅನಧಿಕೃತ (Relocation) | 5,50,000/- |
| | ಭಾಗಶಃ - ದುರಸ್ಥಿ(ಬಿ1) | ಅಧಿಕೃತ | 3,00,000/- |
| | | ಅನಧಿಕೃತ (Insitue) | 1,00,000/- |
| 3 | ಅಲ್ಪಸ್ವಲ್ಪ (ಸಿ) | ಅಧಿಕೃತ | 50,000/- |
| | | ಅನಧಿಕೃತ | 50,000/- |

ರಾಜ್ಯದಲ್ಲಿ 2019 ನೇ ಸಾಲಿನಲ್ಲಿ ಉಂಟಾದ ನೆರೆ ಹಾವಳಿಯಿಂದ ಒಟ್ಟು 133614 ಮನೆಗಳು ಹಾನಿಗೊಳಗಾಗಿರುವುದಾಗಿ ಮತ್ತು 2020 ನೇ ಸಾಲಿನಲ್ಲಿ ಒಟ್ಟು 37745 ಮನೆಗಳು ಹಾನಿಗೊಳಗಾಗಿರುವುದಾಗಿ ಜಿಲ್ಲಾಧಿಕಾರಿಗಳು ಅನುಮೋದಿಸಿರುತ್ತಾರೆ. ವಿವರ ಕೆಳಕಂಡಂತಿದೆ.

| ಕ್ರ. ಸಂ. | ವರ್ಗ | ವರ್ಷ 2019-2020 | ವರ್ಷ 2020-2021 | ಒಟ್ಟು |
|---|---|---|---|---|
| 1 | ಸಂಪೂರ್ಣ-ಅಧಿಕೃತ (ಎ) | 10502 | 1087 | 12040 |
| | ಸಂಪೂರ್ಣ-ಅನಧಿಕೃತ (ಎ) | 451 | | |
| 2 | ಭಾಗಶಃ-ಪುನರ್ ನಿರ್ಮಾಣ-ಅಧಿಕೃತ (ಬಿ2) | 26078 | 7649 | 36833 |
| | ಭಾಗಶಃ-ಪುನರ್ ನಿರ್ಮಾಣ-ಅನಧಿಕೃತ (ಬಿ2) | 155 | | |
| | ಭಾಗಶಃ-ದುರಸ್ಥಿ-ಅಧಿಕೃತ (ಬಿ1) | 2893 | | |
| | ಭಾಗಶಃ-ದುರಸ್ಥಿ-ಅನಧಿಕೃತ (ಬಿ1) | 58 | | |
| 3 | ಅಲ್ಪಸ್ವಲ್ಪ-ಅಧಿಕೃತ (ಸಿ) | 91031 | 29009 | 122486 |
| | ಅಲ್ಪಸ್ವಲ್ಪ-ಅನಧಿಕೃತ (ಸಿ) | 2446 | | |
| **ಒಟ್ಟು** | | **133614** | **37745** | **171359** |

| | | |
|---|---|---|
| | | ನೆರೆ ಹಾವಳಿಯಿಂದ ಹಾನಿಗೊಳಗಾಗಿರುವ ಮನೆಗಳಿಗೆ ಮೇಲ್ಕಂಡಂತೆ ಜಿಲ್ಲಾಧಿಕಾರಿಗಳು ದೃಢೀಕರಿಸಿ ಅನುಮೋದಿಸಿದ ಅರ್ಹ ಫಲಾನುಭವಿಗಳು ನಿರ್ಮಿಸಿರುವ ಮನೆಗಳ ವಿವಿಧ ಹಂತಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಆನ್‌ಲೈನ್‌ಗೆ ಅಪ್ಲೋಡ್ ಮಾಡಿದ ಜಿಪಿಎಸ್ ಛಾಯಾಚಿತ್ರಗಳನ್ನು ತಹಶೀಲ್ದಾರ್ ರವರು ಪರಿಶೀಲಿಸಿ, ಅರ್ಹಗೊಳಿಸಿ ಅನುದಾನ ದೃಢೀಕರಣ (Payment Certification) ನೀಡಿದ ಪ್ರಗತಿಯಲ್ಲಿರುವ ಎಲ್ಲಾ ಮನೆಗಳಿಗೆ ಕಾಲಕಾಲಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>ರಾಜ್ಯದಲ್ಲಿ 2019 ನೇ ಸಾಲಿನಲ್ಲಿ ಉಂಟಾದ ನೆರೆ ಹಾವಳಿಯಿಂದ ಹಾನಿಯಾದ ಮನೆಗಳಿಗೆ ರೂ.1871.35 ಕೋಟಿ ಹಾಗೂ 2020 ನೇ ಸಾಲಿನಲ್ಲಿ ಉಂಟಾದ ನೆರೆ ಹಾವಳಿಯಿಂದ ಹಾನಿಯಾದ ಮನೆಗಳಿಗೆ ರೂ.77.60 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ವಿವರ ಈ ಕೆಳಗಿನಂತಿದೆ : |

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವರ್ಗ | ವರ್ಷ | |
|---|---|---|---|
| | | 2019-2020 | 2020-2021 |
| 1 | (ಎ) ವರ್ಗ | 397.46 | 5.59 |
| 2 | (ಬಿ) ವರ್ಗ (ಬಿ1+ಬಿ2) | 1025.1 | 45.63 |
| 3 | ಅಲ್ಪಸ್ವಲ್ಪ- (ಸಿ) | 448.79 | 26.38 |
| **ಒಟ್ಟು** | | **1871.35** | **77.60** |

2019-20 ನೇ ಸಾಲಿನ ಪುನರ್ವಸತಿ ಯೋಜನೆಯಡಿ ಅಲ್ಪಸ್ವಲ್ಪ-(ಸಿ) ವರ್ಗದಲ್ಲಿ ರೂ.49.38 ಕೋಟಿ ಪರಿಹಾರವನ್ನು ನಿಗಮದಿಂದ ಬಿಡುಗಡೆ ಮಾಡಿದ್ದು, ನಂತರದಲ್ಲಿ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಪರಿಹಾರ ವಿತರಿಸಲಾಗಿದೆ.

ಸಂಖ್ಯೆ :ವಇ130 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು